**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1143/2017**

**ಸಿ ಡಬ್ಲ್ಯೂ - 9**

**ಪಿ ಡಬ್ಲ್ಯೂ - 5**

**ಸಾಕ್ಷಿಯ ಹೆಸರು - ಅನ್ವರ್ ಭಾಷಾ**
**ತಂದೆಯ ಹೆಸರು - ಹುಸೇನ ಸಾಬ**
**ವಯಸ್ಸು - 48 ವರ್ಷಗಳು**
**ಉದ್ಯೋಗ - ವ್ಯವಸಾಯ**
**ವಾಸಸ್ಥಳ - ನಾಗೇನಹಳ್ಳಿ**

**ಸಾಕ್ಷಿಯನ್ನು ದಿನಾಂಕಃ 26-12-2024 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಮಾಲು ಜಪ್ತು ಪಂಚನಾಮೆಯಲ್ಲಿನ **2-** ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **23** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಗಳನ್ನು ನಿಪಿಃ **23 (**ಸಿ**)** ಮತ್ತು **23 (**ಡಿ**)** ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು **6-7** ವರ್ಷಗಳ ಹಿಂದೆ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿಲ್ಲ. ನನಗೆ ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈಗ ನಾನು ನೋಡುತ್ತಿರುವ **6** ಫೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸಾಕ್ಷಿ ನಿಪಿಃ **10** ರಿಂದ **13** ರಲ್ಲಿನ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಇನ್ನೊಂದು ಜಪ್ತು ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ 24 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 24 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 6-7 ವರ್ಷಗಳ ಹಿಂದೆ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈಗ ನಾನು ನೋಡುತ್ತಿರುವ ಪೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸಾಕ್ಷಿ ನಿಪಿಃ 14 ರಲ್ಲಿನ ಪೋಟೋನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 17-05-2017 ರಂದು ನನ್ನನ್ನು ಮತ್ತು ಚಾಸಾ -8 ರವರನ್ನು ಪ್ರಕರಣದ ತನಿಖಾಧಿಕಾರಿಯು ಠಾಣೆಗೆ ಕರೆಸಿದ್ದಾಗ 3 ನೇ ಆರೋಪಿಯು ಉಚ್ಚ ನ್ಯಾಯಾಲಯದಿಂದ ಜಾಮೀನು ಪಡೆದು ವಿಚಾರಣೆಗೆ ಹಾಜರಾಗಿದ್ದ ಅಂದರೆ ಸರಿಯಲ್ಲ. ಆತ ಪ್ರಕರಣದಲ್ಲಿನ ಇತರೆ ಆರೋಪಿತರೊಂದಿಗೆ ಸೇರಿ ರಾಧಾಕೃಷ್ಣ ಆಟೋ ಮೊಬೈಲ್ಸ್ ಬೀಗ ಮುರಿದು ಮನೆ ಬಳಕೆ ಸಾಮಾನುಗಳು ಮತ್ತು ಲಾರಿ ಬಿಡಿ ಭಾಗಗಳನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿದ ಅಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಜಂಭುನಾಥ ರಸ್ತೆಯಲ್ಲಿನ ಜನತಾ ಮನೆಯಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿದ ಅಂದರೆ ಸರಿಯಲ್ಲ.

**ಸಿ ಡಬ್ಲ್ಯೂ - 9**
**ಪಿ ಡಬ್ಲ್ಯೂ - 5**

ಠಾಣಾಧಿಕಾರಿಯು ಕೆಎ-34-ಜಿ-531 ರಲ್ಲಿ ಸದರಿ ಆರೋಪಿ ಕರೆದುಕೊಂಡು ಹೋದ ಸ್ಥಳಕ್ಕೆ ಪಂಚರಾದ ನಮ್ಮನ್ನು ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ.

ಅದೇ ದಿನ ಬೆಳಿಗ್ಗೆ 10-00 ಗಂಟೆಗೆ 3 ನೇ ಆರೋಪಿ ತೋರಿಸಿದ ಜಂಭುನಾಥ ರಸ್ತೆಯಲ್ಲಿರುವ ಒಂದು ಜನತಾ ಮನೆಯಲ್ಲಿ ಲಾರಿಯ ಬಿಡಿಭಾಗಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿಃ 23 ರ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿಃ 10 ರಿಂದ 13 ರ ಫೋಟೋ ಆಗಲೇ ತೆಗೆಯಲಾಗಿತ್ತು ಅಂದರೆ ಸರಿಯಲ್ಲ.

ದಿಃ 18-05-2017 ರಂದು ಪ್ರಕರಣದ ತನಿಖಾಧಿಕಾರಿ ನನ್ನನ್ನು ಮತ್ತು ಚಾಸಾ -8 ರವರನ್ನು ಠಾಣೆಗೆ ಕರೆದಾಗ 4 ನೇ ಆರೋಪಿ ಹಾಜರು ಇದ್ದ ಅಂದರೆ ಸರಿಯಲ್ಲ. ಆತ ನಮ್ಮ ಸಮಕ್ಷಮ ತನಿಖಾಧಿಕಾರಿಯ ಮುಂದೆ ಬೀಗದ ಕೈಯನ್ನು ಹಾಜರುಪಡಿಸಿದಾಗ ಮಧ್ಯಾಹ್ನ 01-00 ರಿಂದ 01-30 ಗಂಟೆಯವರೆಗೆ ನಿಪಿಃ 24 ರಂತೆ ಪಂಚನಾಮೆ ಮಾಡಿ ಸದರಿ ಬೀಗದ ಕೈಯನ್ನು ಜಪ್ತು ಪಡಿಸಿಕೊಳ್ಳಲಾಯಿತು ಅಂದರೆ ಸರಿಯಲ್ಲ. ನಿಪಿಃ 24 ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿಃ 14 ರ ಫೋಟೋ ಆಗಲೇ ತೆಗೆಯಲಾಗಿತ್ತು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಈ ದಿನ 3 ಮತ್ತು 4 ನೇ ಆರೋಪಿತರು ಹಾಜರು ಇದ್ದು, ಸದರಿಯವರನ್ನು ನಾನು ಈ ಮೊದಲು ನೋಡಿರುತ್ತೇನೆ ಅಂದರೆ ಸರಿಯಲ್ಲ.

ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಜಿ ಪಿ ಆರ್.,ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.